# ರೈತರ ಆತ್ಮಹತ್ಯೆ ತಡೆಗೆ ಯೋಜನೆ ರೂಪಿಸಲು ಸಲಹೆ

ತುಮಕೂರು

ಹೂಳೆತ್ತುವುದು ಮತ್ತು ಕೆರೆ, ಕಟ್ಟೆಗಳ ದುರಸ್ತಿ, ಅಭಿವೃದ್ಧಿ, ಚೆಕ್ ಡ್ಯಾಂ ನಿರ್ಮಾಣ, ಯಾವುದೇ ಬೆಳೆಗೆ ಅಗತ್ಯವಾದಷ್ಟು ನೀರು ಹರಿಸುವ ಪ್ರಜ್ಞೆ ಮೂಡಿಸಲು ಪ್ರತಿ ಬಜೆಟ್‌ನಲ್ಲಿ 10 ಸಾವಿರ ಕೋಟಿ ರೂ. ಮೀಸಲಿಟ್ಟು ರೈತರ ಆತ್ಮಹತ್ಯೆ ತಡೆಗೆ ಯೋಜನೆಗಳನ್ನು ರೂಪಿಸಬೇಕೆಂದು ಮುಖ್ಯಮಂತ್ರಿಗೆ ವಿಧಾನಸಭೆ ಮಾಜಿ ಅಧ್ಯಕ್ಷ ಕೃಷ್ಣ ಸಲಹೆ ನೀಡಿದರು.

ವಿಶ್ವ ತೆಂಗು ದಿನಾಚರಣೆ ಅಂಗವಾಗಿ ತುಮಕೂರು ವಿವಿ ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಕಾಸರಗೋಡಿನ ಸಿಪಿಸಿಆರ್‌ಐ, ತುಮಕೂರು ವಿ.ವಿ ಪ್ರಸಾರಾಂಗ, ಹಾಸನದ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಏರ್ಪಡಿಸಿದ್ದ ಕಲ್ಪರಸ ನೀತಿ ಎಂಬ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನೀರಾನಿಧಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ತೆಂಗಿನ ಮರಗಳಿಂದ ನೀರಾ ಇಳಿಸಲು ಸರ್ಕಾರ ತಕ್ಷಣವೇ ಕಾಯ್ದೆಗೆ ತಿದ್ದುಪಡಿ ತರಬೇಕು. ಕೊಳವೆಬಾವಿ ಕೊರೆಸುವ ಪ್ರತಿಯೊಬ್ಬರೂ ಕೃಷಿಹೊಂಡವನ್ನು ಕಡ್ಡಾಯವಾಗಿ ನಿರ್ಮಿಸಬೇಕು ಎಂದು ಹೇಳಿದರು.



ತುಮಕೂರು ವಿವಿ ಸರ್‌ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆದ ಕಲ್ಪರಸ ನೀತಿ ಎಂಬ ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ನೀರಾನಿಧಿ ಪುಸ್ತಕವನ್ನು ವಿಧಾನಸಭಾ ಮಾಜಿ ಅಧ್ಯಕ್ಷ ಕೃಷ್ಣ ಬಿಡುಗಡೆಗೊಳಿಸಿದರು. ಸಚಿವ ಟಿ.ಬಿ.ಜಯಚಂದ್ರ, ವಿವಿ ಕುಲಪತಿ ಪ್ರೊ.ಎ.ಎಚ್.ರಾಜಾಸಾಬ್ ಇತರರಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಕಾನೂನು ಖಾತೆ ಸಚಿವ ಟಿ.ಬಿ.ಜಯಚಂದ್ರ ಸರಳ ರೀತಿಯಲ್ಲಿ ಕಲ್ಪರಸ ತಯಾರಿಸಲು ತೆಂಗು ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಕಾಯ್ದೆಗೆ ತಿದ್ದುಪಡಿ ತಂದು ನೀರಾ ಇಳಿಸಲು ಅವಕಾಶ ಕಲ್ಪಿಸುತ್ತೇನೆ. ನೀರಾದಿಂದ ರೈತರ ವರಮಾನ ಹೆಚ್ಚುವುದಾದರೆ ಈ ಅಧಿವೇಶನದಲ್ಲೇ ಕಾಯ್ದೆಗೆ ತಿದ್ದುಪಡಿ ತರುತ್ತೇನೆ. ಆದರೆ ಮಳೆ ಇಲ್ಲದೆ ತೆಂಗಿನ ಮರಗಳಲ್ಲಿ ರಸ ಹೇಗೆ ಬರುತ್ತದೆ ಎಂದು ಪ್ರಶ್ನಿಸಿದರು.

ಕಾಸರಗೋಡಿನ ಸಿಪಿಸಿಆರ್‌ಐ ನಿರ್ದೇಶಕ ಡಾ.ಚೌಡಪ್ಪ ಮಾತನಾಡಿ, ವಿಶ್ವದ 18 ದೇಶಗಳು ತೆಂಗು ಬೆಳೆಗಾರರ ಒಕ್ಕೂಟಗಳನ್ನು ರಚಿಸಿಕೊಂಡು ತೆಂಗು ಮತ್ತು ನೀರಾ ಉತ್ಪನ್ನಗಳನ್ನು ಮಾರಾಟ ಮಾಡುವ ಮೂಲಕ ವಾರ್ಷಿಕ ಕೋಟ್ಯಂತರ ರೂ. ಲಾಭ ಪಡೆಯುತ್ತಿವೆ. ಫಿಲಿಫೈನ್, ಇಂ-ಡೋನೇಷಿಯಾ ದೇಶಗಳಿಗಿಂತ ಅಧಿಕವಾಗಿ ತೆಂಗು ಬೆಳೆಯುವ ಭಾರತ ವಿಶ್ವಮಟ್ಟದಲ್ಲಿ ತನ್ನ ಗ್ರಾಹಕರನ್ನು ಹೆಚ್ಚು ಹೊಂದಲು ಸಾಧ್ಯವಾಗಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ.ಎ.ಎಚ್. ರಾಜಾಸಾಬ್ ಮಾತನಾಡಿ, ಕೇರಳ ಮಾದ-ರಿಯಲ್ಲಿ ತಿಪಟೂರು, ತುಮಕೂರಿನಲ್ಲಿ ನೀರಾ ಉಪಉತ್ಪನ್ನಗಳನ್ನು ತಯಾರಿಸಲು ಸರ್ಕಾರ ಅವಕಾಶ ನೀಡಬೇಕು ಎಂದರು.

ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆಯ ಜಯಪ್ರಸಾದ್, ಚಳ್ಳಕೆರೆ ಪ್ರಗತಿಪರ ರೈತ ಸೋಮಶೇಖರರೆಡ್ಡಿ, ಡಾ.ನಿತ್ಯಾನಂದಶೆಟ್ಟಿ, ರೈತ ಅಣೆಕಟ್ಟೆ ವಿಶ್ವನಾಥ್, ಮದ್ಯಪಾನ ಮತ್ತು ಸಂಯಮ ಮಂಡಳಿ ಅಧ್ಯಕ್ಷ ರಂಗಸ್ವಾಮಯ್ಯ ಮತ್ತಿತರರಿದ್ದರು.